# ಆಧುನಿಕ ಕನ್ನಡ ವಚನ ಸಾಹಿತ್ಯ ಪರಂಪರೆ

**ಪವಿತ್ರ ಎ.ವಿ.**

**ಅತಿಥಿ ಉಪನ್ಯಾಸಕರು**

**ಶ್ರೀಮತಿ ಇಂದಿರಾಗಾಂಧಿ ಮಹಿಳಾ ಕಾಲೇಜು ಸಾಗರ**

ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯವು ಸಮೃದ್ಧವಾಗಿ ಬೆಳೆದಿದೆ. ಅಂದರೆ ಹೊಸಗನ್ನಡ ಸಾಹಿತ್ಯ ಘಟ್ಟದಲ್ಲಿ ನೂರಕ್ಕೂ ಹೆಚ್ಚು ಜನರು ವಚನಗಳನ್ನು ರಚಿಸಿದ್ದಾರೆ. ನವೋದಯ ಕನ್ನಡ ಸಾಹಿತ್ಯದ ಪರಂಪರೆಯಹಲ್ಲಿ ಶಿವಶರಣರ ವಚನಗಳ ಪ್ರಭಾವ ಪ್ರೇರಣೆ ಪಡೆದಿದ್ದಾರೆ. ಶಿವಶರಣರ ವಚನಗಳಲ್ಲಿನ ದೇಶಿಯ ಸತ್ವವಿರುವುದರೊಂದಿಗೆ ಅವುಗಳ ಆಶಯದ ಸ್ವರೂಪವು ಸಹ ನವೋಚಯದ ಆಶಯಗಳಿಗೆ ತೀರ ಹತ್ತಿರವಾಗಿ ನಿಂತಿದ್ದರಿಂದ ಆಧುನಿಕ ಯುಗದಲ್ಲಿ ಸಾಹಿತ್ಯಿಕ ಧಾರ್ಮಿಕ, ಸಾಂಸ್ಕೃತಿಕ ದೃಷ್ಟಿಯಿಂದ ವಚನ ರಚನೆಗೆ ಹೆಚ್ಚಿನ ಮಹತ್ವ ಕೊಟ್ಟರು. ಬಸವಾದಿ ಶರಣರ ವಚನ ಪರಂಪರೆಯು ಆಧುನಿಕ ವಚನಕಾರರ ಮೇಲೆ ಪ್ರಭಾವ ಬೀರಿತು ಇದರಿಂದಾಗಿ ಈ ಯುಗದಲ್ಲಿಯು 'ವಚನ' ಎಂಬ ಮಾಧ್ಯಮ ಬೆಳೆಯಲು ಕಾರಣವಾಯಿತು. ಆಧುನಿಕ ವಚನ ಸಾಹಿತ್ಯ ಕ್ಷೇತ್ರದಲ್ಲಿ ಎಸ್. ವಿ. ರಂಗಣ್ಣ, ಡಾ.ಜ.ಚ.ನಿ. ಎಸ್.ವಿ.ಪರಮೇಶ್ವರ ಭಟ್ಟ, ಸಿದ್ದಯ್ಯ ಪುರಾಣಿಕ, ಕುವೆಂಪು, ಡಾ.ಆರ್.ಸಿ. ಹಿರೇಮಠ, ಮೊದಲದವರು ವಚನ ಸಾಹಿತ್ಯದಲ್ಲಿ ತಮ್ಮದೆ ಅದ ಛಾಪು ಮೂಡಿಸಿ ವಚನ ಪ್ರಕಾರವನ್ನು ಮೇಲು ಸ್ತರಕ್ಕೆ ಒಯ್ದಿರುವ ಈ ಯುಗದಲ್ಲಿ ವಚನಗಳು ಕನ್ನಡ ಸಾಹಿತ್ಯಕ್ಕೆ ವೈವಿದ್ಯತೆಯನ್ನು ಶ್ರೀಮಂತಿಕೆಯನ್ನು ತಂದುಕೊಟ್ಟಿದ್ದಲ್ಲದೆ ಸಮಜದ ಸರ್ವೋತೋಮುಖ ದರ್ಶನವನ್ನು ಒಳಗೊಂಡಿದೆ. ಆಧುನಿಕ ಯುಗದಲ್ಲಿ ವಚನ ಪರಂಪರೆಯಲ್ಲಿ ಸಮಾಜದ ಎಲ್ಲಾ ವರ್ಗ-ವರ್ಣಗಳ ಸ್ತ್ರೀ ಪುರುಷರು ಪಾಲ್ಗೊಂಡು ಆಧುನಿಕ ಸಾಹಿತ್ಯ ಶ್ರೀಮಂತಗೊಳಿಸಿದ್ದಾರೆ.

ಕೆವಲು ಆಧುನಿಕ ವಚನಕಾರರ ಅವಲೋಕನ ಹೀಗಿದೆ:

ಹರ್ಡೇಕರ ಮಂಜಪ್ಪ.

ಕರ್ನಾಟಕ ಗಾಂಧಿ ಎಂದೇ ಪರಿಚಿತರಾದ ಇವರು ಆದ್ಯ ಆಧುನಿಕ ವಚನಕಾರರು. ಇವರು ಪ್ರಥಮವಾಗಿ ವಚನ ಸಂಕಲನವನ್ನು ಪರಿಚಯಿಸಿ ಇಂದಿನ ವಚನ ಸಾಹಿತ್ಯಕ್ಕೆ ಆಧುನಿಕ ರೂಪಕೊಟ್ಟ ಹಲವಾರು ವಚನಗಳನ್ನು ರಚಿಸಿದರು. ಇವರ ವಚನಗಳಲ್ಲಿ ಬರುವ ಗುರುಸ್ತುತಿ ಗುರುದರ್ಶನ ಆತ್ಮ ವಿಮರ್ಶೆಗಳು ಸಾದರಪಡಿಸುವುದು ಹೀಗೆ:

"ಜನಸೇವಕರಿಗೆ ತನು ವಂಚಿಸಿಕೊಂಡಡೆ
ತನ್ನ ಮರಣವಯ್ಯ
ಲೋಕ ಸೇವೆಗೆ ತನು ತ್ಯಾಗ ಮಾಡಿದೊಡೆ
ಅಧೋ ಜೀವಿತವಯ್ಯ
ಕಬ್ಬು ನುಚ್ಚು-ನುಚ್ಚಾಗಿದ್ದರೆ ರುಚಿಯುಂಟೆ
ಇದು ಕಆರಣ ಪ್ರಭುದೇವ, ಜನಸೇವೆಕಂಗೆ
ಕಬ್ಬಿನಂತೆ ತನುವನೀತ ಒಲವಿತ್ತು ಬದುಕಿಸಯ್ಯ
ಎಂಬ ವಚನ ಮನ ಮುಟ್ಟುವಂತೆ ವ್ಯಕ್ತಪಡಿಸಿದ್ದಾರೆ.

ಎಸ್.ವಿ. ರಂಗಣ್ಣ

ಹಲವುಯ ಕೃತಿಗಳನ್ನು ರಚಿಸಿದ ಇವರ 'ರಂಗಬಿನ್ನಪ' ಕೃತಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನವಾದ ಕೃತಿಯಾಗಿದೆ. ಇವರ ಒಂದು ವಚನ ಹೀಗೆದೆ.

"ಗಿಣಿ ಇದ್ದಲ್ಲಿ ಪಂಜರ
ನೀರು ತುಮಬಿದರೆ ಕೆರೆ
ಸುವಾಸನೆ ಕೂಡಿ ಶ್ರೀಗಂದ
ಮೆದುಳಿದ್ದವನೆ ಮನುಷ್ಯ
ಮೂಲ ದೇವರಿಂದ ದೇವಾಸ್ಥಾನ
ತಾಯಿ ಇದ್ದರೆ ಮನೆ ರಂಗಯ್ಯಾ"

ಪಂಜರ, ಕೆರೆ, ಶ್ರೀಗಂದ, ಮನುಷ್ಯ, ದೇವಸ್ಥಾನ ಮತ್ತು ಮನೆ ಇವೆಲ್ಲದಕ್ಕೂ ಅರ್ಥ ಬರಬೇಕಾದರೆ ಗಿಣಿ, ನೀರು, ಸುವಾಸನೆ, ಮೆದುಳು, ಮೂಲ ದೇವರು ಮತ್ತು ತಾಯಿ ಇದ್ದರೆ ಮಾತ್ರ ಸಾಧ್ಯ. ಆದ್ದರಿಂದ ಯಾವುದರಿಂದ ಮಹತ್ವ ಉಂಟಾಗುತ್ತದೆ ಎಂಬುದು ಈ ವಚನದ ಉದ್ದೇಶವಾಗಿದೆ. ಮನುಶುದ್ಧಿ ಇಲ್ಲದೆ ತೋರಿಕೆಗಾಗಿ ಪ್ರಾರ್ಥನೆ ಸಲ್ಲಿಸುವವರನ್ನು ಕಂಡು ವಿಡಂಬಿಸಿರುವುದನ್ನು ಈ ಕೆಳಗಿನ ವಚನದಲ್ಲಿ ಕಾಣಬಹುದು.

'ಪಾಪ ಬುದ್ದಿಯ ಒಳಗೆ ತುಂಬಿಕೊಂಡು
ಪಾಪಗಳ ನಡುವೆ ನಿಂತುಕೊಂಡು
ಪಾಪದಿಂದ ದೂರವಿರಸೆಂದು ದೇವರನ್ನು
ಪ್ರಾರ್ಥಿಸುವವರು
ಮತ್ತೆ ಮತ್ತೆ
ಪ್ರಾರ್ಥನೆಗೆ ಇರುವ ಅವಸರ ದೂರ ಸರಿಯುವ
ಪ್ರಯತ್ನಕ್ಕೆ
ಇಲ್ಲಯ್ಯ ರಂಗಯ್ಯ"

ಹೀಗೆ ಎಸ್.ವಿ. ರಂಗಣ್ಣನವರ ವಚನಗಳು ವಸ್ತುವಿನ ದೃಷ್ಟಿಯಿಂದ ಸ್ಪಂದಿಸುತ್ತವೆ.

ಡಾ.ಜ.ಚ.ನಿ.

ಸಮಾಜವಾದಿ ಪ್ರಜಪ್ರಭುತ್ವೇ ಆಶಯವಾಗುಳ್ಳ ಭಾರತದ ಸಂವಿಧಾನವು ಕೇವಲ ಘೋಷಣೆಯ ನೆಲೆಯಲ್ಲಿ ಮಾತ್ರ ನಿಂತಿದೆ ಎನ್ನುವ ಜ.ಚ.ನಿ.

"ಭೂ ಹೀನರ ಭಾರಿ ಮತದರ್ಶನ
ಪಂಜು ಕೊಳೆವಿಡಿದು ಪರಿವಿಡಿದ ಮೆರವಣಿಗೆ
ಕೇಳುವರಿಲ್ಲದ ಹಿಂದುಳಿದವರ ಪಾಡು
ಬಾಳುವಂತಿಲ್ಲ ಮುಂದುವರಿದವರು"

ಎನ್ನುತ್ತಾರೆ

ಪರಂಪರೆಯ ಜೊತೆಗೆ ತಮ್ಮ ವಚನಗಳಲ್ಲಿ ಸಮಕಾಲಿನ ಯುಗ ಪ್ರಜ್ಞೆಯನ್ನು ಪ್ರಕಟಿಸಿ ಸುಮಾರು 6361 ವಚನಗಳನ್ನು ರಚಿಸಿದ್ದಾರೆ.

ಎಸ್.ಟಿ. ಪರಮೇಶ್ವರ ಭಟ್ಟ:

ಕನ್ನಡದ ಕಾಳಿದಾಸ ಎಂದೆ ಖ್ಯಾತನದ ಇವರು "ಸದಾಶಿವಗುರು" ಎಂಬ ಅಂಕಿತದಲ್ಲಿ ಬರೆದ ವಚನಗಳು ಜೀವನದಲ್ಲಿ ಕಂಡುಕೊಂಡ ಅನುಭವಗಳ ಸಾರ ತಮ್ಮದೆಯಾದ ರೀತಿಯಲ್ಲಿ ಅರ್ಥೈಸಿಕೊಂಡಿರುವ ಇವರ ಇಷ್ಟ ದೈವದೊಂದಿಗಿನ ಸಂಬಂದ ಬಾವುಕಥೆಯ ತೀವ್ರತೆಯ ಪ್ರತೀಕ ಇಷ್ಟದೈವದೊಂದಿಗೆ ಆತ್ಮಿಯತೆಯಿಂದ ಸಂಭಾಷಣೆಗೆ ಇಳಿಯುತ್ತಾರೆ.

"ನಾನು ನಿನ್ನನ್ನು ಕೈ ಹಿಡಿದು ನಡೆಸು ಎಂದು
ಬೇಡುವುದಿಲ್ಲ
ನಾನು ನಡುನೀರು ದಾಡಿಯಾಗಿದೆ
ಇನ್ನುಳಿದಿರುವುದ ಆಚೆ ದಡದ ತಳ್ಳ ನೀರು
ಬೇಗ ಬರುತ್ತೇನೆ ನಿನ್ನಲಿಯೇ ನಿಂತಿರುವ
ಸದಾಶಿವಗುರು"

ಆತ್ಮನೀವೇದನೆ, ಆತ್ಮವಿಮರ್ಶೆ, ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಛಲ ಇದೆ. ಸಹೃದಯ ಸಹಜ ಅಂತಃಕರಣ ಅವರ ವಚನಗಳಲ್ಲಿ ಪ್ರತಿಬಿಂಬಿತವಾಗಿದೆ.

ಕುವೆಂಪು

ಇವರ ಕಿಂಕಿಣಿ ವಚನ ಸಂಕಲನ ಹೀಗಿದೆ

"ಭಾವವೀಚೆಗೀಲಿದು ಹೃದಯ ಸರೋವರ ನಿಸ್ತರಂಗ
ಚಿಂತೆಯೂರ್ಮಿಗಳುಡಿಗಿ ಚಿತ್ತವಾರಿಧಿ ಆ ಚಂಚಲ
ಉಳಿದೆಲ್ಲ ಉಪಾದಿಗಳಗುಳಿದಾತ್ಮ ತಾನೆ ಕಿಂಕಿಣಿ!
ಅರ್ಥ ಮುಕ್ತ ಭಾವದೀಪ್ತ ಧ್ವನಿಪ್ರಚುರ ಕೇಳ್
ದ್ಯಾನುದೇನು ಕಿಂಕಿಣಿ!"

ಎನ್ನುವ ಈ ವಚನ ಇಡೀ ಸಂಕಲನದ ವಸ್ತು ಸ್ವರೂಪದ ಮೇಲೆ ಬೆಳಕು ಹಾಯಿಸುತ್ತದೆ ಹಾಗೂ ಅದ್ವೈತದ ನಿಲುವು ಗೋಚರಿಸುತ್ತದೆ.

ಸಿದ್ಧಯ್ಯ ಪುರಾಣಿಕ:

ಇವರ ವಚನಗಳು ಸಾಮಾಜಿಕ ದುರವಸ್ಥೆಯ ಓರೆಕೋರೆಗಳ ಅಸಮಾನತೆಗಳು ಅವರನ್ನು ದುಃಖಕ್ಕಿಡು ಮಾಡುತ್ತವೆ.

"ಹೊಮರನಂತೆ ವಿಶ್ವಕವಿಗಳು ಬಿಕ್ಷೆ ಬೇಡಬೇಕು
ಹೆಂಡ ಮಾರುವವನು ಲಕ್ಷದೀಶನಾಗಬೇಕು
ಇದೇ ನಿನ್ನ ಸಾಮಾಜಿಕ ನ್ಯಾಯವೇನಯ್ಯ
ದುಡಿದವರಿಗೆ ದುಗ್ಗಾಣಿ ದುಡಿಸಿಕೊಳ್ವರಿಗೆ ಐಶ್ವರ್ಯ
ಇದುವೆ ನಿನ್ನ ಆರ್ಥಿಕ ವ್ಯವಸ್ಥೆಯೇನಯ್ಯ"

ಪುರಾಣಿಕರಿಗೆ ನೀತಿವಾಕ್ಯಗಳು ಹೇಳುವ ಆಶಯವು ಇದೆ.

ದ.ರಾ. ಬೇಂದ್ರೆ:

ಇವರ 'ಉಯ್ಯಾಲೆ ಮತ್ತು ನಾಕುತಂತಿ'ಗಳಲ್ಲಿ ಕರುಳಿನ ವಚನಗಳಿವೆ ಇವರ ವಚನಗಳು ಲೌಕಿಕ ಸಾಧನೆಯ ಮಾರ್ಗದೊಳಗಿನವು.

"ಎಂಜಲು ಮಾಡಿದಿಲ್ಲಿ ಆಯ್ತು ಮಸಣದ
ಮಹಾದೇವನ ಮುಡಿಯೊಳಗಿನ ಮೀಸಲ ಮುದುಗಣಕೆ
ನಿಮಿತ್ತ ಮಾತ್ರ ಕ್ಷಣ ಭಾವವಾಗಿ ಬಂದ ಕೂಸೆ
ಸಂಸಾರದ ಸವಿ ಸುಖ-ದುಃಖ ಸರಿಬೆರಕೆಯೆಂದು
ಕಲಿಸಿದೆ
ಆದರೆ ನಿಜವಾದ ಅಖಂಡ ಪ್ರೀತಿ ಝರಿಯನ್ನು ಪ್ರವೇಶಿಸಿವೆ"

ಎಂಬ ವಚನವೂ ತಾಯಿ ಮಗುವಿನ ಭಾವಕೋಶವಾಗಿದೆ ಹೀಗೆ ಬೇಂದ್ರೆಯವರ ಕರುಳಿನ ಸತ್ವ ಅನಾವರಣಗೊಂಡಿದೆ.

ಡಾ. ಕಮಲಾ ಹಂಪನ:

ಇವರು ತಮ್ಮ ಬದುಕಿನ ನೂರಾರು ಅನುಭವಗಳನ್ನು ತಮ್ಮ ವಚನಗಳಲ್ಲ ಹಿಡಿದಿಟ್ಟಿದ್ದಾರೆ.

"ಅಕ್ಷತೆ ಸುರಿದ ಕೈಯಲ್ಲಿ ಸೀಮೆ ಎಣ್ಣೆ ಸುರಿವರಯ್ಯ
ಅರಸಿನ ಹಚ್ಚಿದ ಕೈಯಲ್ಲಿ
ಬೆಂಕಿ ಹಚ್ಚಿ ಸುಡುವರಯ್ಯ
ವಧುಮಾಡಿ ಮನೆ ತುಲಂಬಿಸಿಕೊಂಡವರೆ
ಹೆಣ ಮಾಡಿ ಆಚೆ ಸಾಗಿಸುವರಯ್ಯ

ಕಮಲಾಪ್ರಿಯಾ

ಇದು ತುಂಬ ಹೃದಯ ಸ್ಪರ್ಶಿಯದ ವಚನವಾಗಿದೆ. ಈ ವಚನಗಳಲ್ಲಿ ಸ್ತ್ರೀ ಶೋಷಣೆಯ ವಿವಿಧ ಮುಖಗಳನ್ನು ಕಣಬಹುದು ಹಾಗೂ ವರದಕ್ಷಿಣೆಯ ಪಿಡುಗು ಹೆಣ್ಣಿನ ಬೆನ್ನುಬಿಡದು ವಧುಮಾಡಿ ಮನೆ ತುಂಬಿಸಿಕೊಂಡವರು ಹೆಣ ಮಾಡಿ ಆಚೆ ಸಾಗಿಸವರು. ಇಲ್ಲಿ ಹೆಣ್ಣೆ ಹೆಣ್ಣಿಗೆ ವೈರಿಯಾಗಿ ಸೊಸೆಯ ಸವಿಗೆ ಅತ್ತೆಯೆ ಕಾರಣವಾಗುತ್ತಾಳೆ ಎಂಬುದನ್ನು ಮಾರ್ಮಿಕವಾಗಿ ವ್ಯಕ್ತವಾಗಿದೆ.

ಇವರ ನಂತರದಲ್ಲಿ ಮಹಾದೇವ ಬಣಕಾರ, ಸಿ.ಪಿ.ಕೆ. ಎಲ್ಲೆಗೌಡ ಬೆಸಗರಳ್ಳಿ, ದೊಡ್ಡೆರಂಗೆಗೌಡ, ವಆಣಿ, ಬಸವರಾಜ ಸಬರದ, ನೀಲಾಂಬಿಕಾ, ಎಚ್. ತಿಪ್ಪೇರುದ್ರಸ್ವಾಮಿ, ಅನ್ನದಾನಯ್ಯ, ಪುರಾಣಿಕ ಇನ್ನೂ ಹಲವಾರು ಸಾಹಿತಿಗಳು ವಚನಗಳನ್ನು ರಚಿಸಿ ಆಧುನಿಕ ಸಾಹಿತ್ಯ ಕ್ಷೇತ್ರವು ಸಮೃದ್ಧಗೊಳಸಿದ್ದಾರೆ.

ಒಟ್ಟಿನಲ್ಲಿ ಈ ಕಾಲದ ವಚನಕರರು ಪ್ರಸ್ತುತ ವಿಧ್ಯಾಮಾನಗಳು, ಸಾಮಾಜಿಕ ಸಮಸ್ಯೆಗಳು, ರಾಜಕೀಯ ಬೆಳವಣಿಗೆ, ಭ್ರಷ್ಟಾಚಾರ, ಗೊಡ್ಡು ಸಂಪ್ರದಾಯ, ಡಾಂಬಿಕ ಆಚರಣೆಗಳ ಕುರಿತಾಗಿ ವಚನಗಳನ್ನು ರಚಿಸಿದ್ದಾರೆ. ಇಂದಿನ ವಚನಾಕರರು ಸಹ ಅಂಕಿತಗಳನ್ನು ತಮ್ಮ ವಚನಗಳಲ್ಲಿ ಬಳಿಸಿದ್ದಾರೆ. ಈ ಹಿನ್ನಲೆಯಲ್ಲಿ 12ನೇ ಶತಮಾನದ ವಚನ ಸಾಹಿತ್ಯ ಆಧುನಿಕ ವಚನಕಾರರ ವಚನಗಳಿಗೆ ಮಾರ್ಗದರ್ಶನವಾಗಿವೆ. ಎಂಬುವುದರಲ್ಲಿ ಸಂಶಯವಿಲ್ಲ. ಹಾಗಾಗಿ ಈ ಕಾಲದ ವಚನಗಳು ಬೆಳಕಿನ ಕಿಡಿಗಳಾಗಿ ವೇದನೆ, ಸಂವೇದನೆ, ನಿವೇದನೆ ಹಾಗೂ ಸಾಮಾಜಿಕ ಸಮಸ್ಯೆಯ ಕಳಕಳಿಯನ್ನು ಹೊತ್ತು ರಚನೆಯಾದ ವಚನಗಳಾಗಿವೆ.

ಆಕರ ಗ್ರಂಥಗಳು

1. ಆಧುನಿಕ ವಚನಕಾರರು – ಎಲ್ಲೇಗೌಡ ಬೆಸಗರಹಳ್ಳಿ

2. ವಚನ ಸಾಹಿತ್ಯ ಸಮೀಕ್ಷೆ – ಡಾ. ವ್ಹಿ.ಜಿ. ಪೂಜಾರ
3. ಆಧುನಿಕ ವಚನವೇತ್ತರ – ಎಂ. ಶಿವಕುಮಾರಸ್ವಾಮಿ
4. ಆದುನಿಕ ವಚನ ಸಾಹಿತ್ಯ – ಡಾ. ನೀಲಮ್ಮ ಕತ್ನಳ್ಳಿ
5. ರಂಗ ಬಿನ್ನಪ್ಪ – ಡಾ. ಎಸ್. ವಿ. ರಂಗಣ್ಣ
6. ದ.ರಾ.ಬೇಂದ್ರೆ – ಡಾ. ಪಿ.ಕೆ. ಖಂಡೋಬಾ.
7. ಇಪ್ಪತ್ತನೆ ಶತಮಾನದ ವಚನಸಾಹಿತ್ಯ ಒಂದು ಅಧ್ಯಯನ– ಡಾ. ಪ್ರೀತಿ ಶುಭಚಂದ್ರ
8. ಆಧುನಿಕ ವಚನಕಾರರು – ಆರ್.ಡಿ. ಜಿ.
9. ಹೈದ್ರಬಾದ ಕರ್ನಾಟಕದ ಪ್ರಾತಿನಿಧಿಕ ಆಧುನಿಕ ವಚನಕಾರರು – ಡಾ. ಃನಮಂತ. ಬಿ. ಮೇಲಕೇರಿ.